# ಕನ್ನಡ ವಿಶ್ವವಿದ್ಯಾಲಯದ ಉದ್ದೇಶಗಳು

೦೧. ಕನ್ನಡ ಭಾಷೆ ಮತ್ತು ಸಾಹಿತ್ಯದಲ್ಲಿ ಉನ್ನತ ಮಟ್ಟದ ಸಂಶೋಧನಾ ಕೇಂದ್ರವಾಗಿ ಪ್ರಕಾರ್ಯ ನಡೆಸುವುದು.

೦೨. ಕನ್ನಡ ಭಾಷೆ ಮತ್ತು ಸಾಹಿತ್ಯವನ್ನು ಅಧ್ಯಯನ ಮಾಡಲು ಅಪೇಕ್ಷಿಸುವ ಭಾರತದೊಳಗೆ ಅಥವಾ ಹೊರಗೆ ವಾಸಿಸುತ್ತಿರುವವರಿಗೆ ತರಬೇತಿ ನೀಡುವುದು.

೦೩. ಕನ್ನಡ ಭಾಷೆ ಮತ್ತು ಸಾಹಿತ್ಯವನ್ನು ಆಧರಿಸಿ ಬೆಳೆದ ಕಲೆ, ಸಂಸ್ಕೃತಿ, ಸಂಗೀತ, ರಂಗನಾಟಕಗಳು, ಜಾನಪದ ಕಲೆ, ವರ್ಣಚಿತ್ರ, ಶಿಲ್ಪಶಾಸ್ತ್ರ, ವಾಸ್ತುಶಿಲ್ಪ, ಭೂಗೋಳ ಶಾಸ್ತ್ರ, ಮಣ್ಣಿನ ವಿಜ್ಞಾನ, ಖಗೋಳಶಾಸ್ತ್ರ, ನೌಕಾಗತಿ ಮತ್ತು ನೌಕಾಶಾಸ್ತ್ರ, ಜೋತಿಷ್ಯ ಶಾಸ್ತ್ರ, ಸಿದ್ಧವೈದ್ಯ, ಇಂಜಿನಿಯರಿಂಗ್ ವಿಜ್ಞಾನ ಮತ್ತು ಕರಕುಶಲತೆಯಂಥ ಕ್ಷೇತ್ರಗಳಲ್ಲಿ ಉನ್ನತ ಶಿಕ್ಷಣ ಮತ್ತು ಸಂಶೋಧನೆಗೆ ಅನುಕೂಲ ಕಲ್ಪಿಸುವುದು ಮತ್ತು ಕ್ರಮಬದ್ಧಗೊಳಿಸುವುದು.

೦೪. ವಿಶ್ವವಿದ್ಯಾಲಯದ ಉದ್ದೇಶಗಳಿಗೆ ಹೊಂದಿಕೊಳ್ಳುವಂತೆ ಅಗತ್ಯಕ್ಕನುಗುಣವಾಗಿ ಇತರ ಭಾಷೆಗಳಲ್ಲಿರುವ ಪುಸ್ತಕಗಳನ್ನು ಕನ್ನಡಕ್ಕೆ ಭಾಷಾಂತರಿಸುವುದು ಮತ್ತು ಕನ್ನಡದಲ್ಲಿರುವ ಪುಸ್ತಕಗಳನ್ನು ಇತರ ಭಾಷೆಗಳಿಗೆ ಸಹ ಭಾಷಾಂತರಿಸುವುದು.

೦೫. ತಾಳೆಗರಿಯಲ್ಲಿರುವ ಹಸ್ತಪ್ರತಿಗಳು ಮತ್ತು ಪ್ರಾಚೀನವಾದ ಅಪೂರ್ವ ಪುಸ್ತಕಗಳನ್ನು ಸಂಪಾದಿಸುವುದು, ಸಂರಕ್ಷಿಸುವುದು ಮತ್ತು ಪ್ರಕಟಿಸುವುದು.

೦೬. ಕನ್ನಡ ಭಾಷೆ, ಸಾಹಿತ್ಯ, ಸಂಸ್ಕೃತಿ ಮತ್ತು ಕನ್ನಡಿಗರ ಇತಿಹಾಸಕ್ಕೆ ಸಂಬಂಧಿಸಿದ ಶಾಸನಗಳಿಗಾಗಿ ಶೋಧನೆ ನಡೆಸುವುದು ಮತ್ತು ಅವುಗಳನ್ನು ಸಂಗ್ರಹಿಸುವುದು ಮತ್ತು ಅದರ ಸಂಶೋಧನೆಯ ಆಧಾರದ ಮೇಲಣ ನಿರ್ಣಯಗಳೊಂದಿಗೆ ಅವುಗಳನ್ನು ಪ್ರಕಟಿಸುವುದು.

೦೭. ಕರ್ನಾಟಕದಲ್ಲಿರುವ ಕನ್ನಡಿಗರಿಂದ ಮತ್ತು ಭಾರತದ ಇತರ ಭಾಗಗಳಲ್ಲಿರುವ ಮತ್ತು ಇತರ ದೇಶಗಳಲ್ಲಿ ವಾಸಿಸುವ ಕನ್ನಡಿಗರಿಂದ ಬಳಸಲಾದ ಕನ್ನಡ ಪದಗಳು, ಅಭಿವ್ಯಕ್ತಿಗಳು, ಆಡುನುಡಿಗಳು, ಕೈಗಾರಿಕೆಗಳು ಮತ್ತು ಕೃಷಿಗೆ ಸಂಬಂಧಪಟ್ಟ ವಿಶಿಷ್ಟ ಪದಗಳನ್ನು ಸಂಗ್ರಹಿಸುವುದು ಮತ್ತು ಪ್ರಕಟಿಸುವುದು.

೦೮. ವೈಜ್ಞಾನಿಕ ಬೆಳವಣಿಗೆಗಳನ್ನು ದೃಷ್ಟಿಯಲ್ಲಿರಿಸಿಕೊಂಡು ಪ್ರಾಚೀನ ಕಾಲದಲ್ಲಿನ ಕನ್ನಡ ಭಾಷೆ ಮತ್ತು ಸಾಹಿತ್ಯದಲ್ಲಿ ಸಂಶೋಧನೆಗಾಗಿ ಏರ್ಪಾಡು ಮಾಡುವುದು.

೦೯. ಅಭಿವೃದ್ಧಿಶೀಲ ವಿಶ್ವದಲ್ಲಿರುವ ಎಲ್ಲ ಶೈಕ್ಷಣಿಕ ಕ್ಷೇತ್ರಗಳನ್ನು ತನ್ನಲ್ಲಿ ಅಡಕ ಮಾಡಿಕೊಂಡಿರುವ ಕನ್ನಡ ಭಾಷೆ ಮತ್ತು ಸಾಹಿತ್ಯದ ಬೆಳವಣಿಗೆಗೆ ಸಂಬಂಧಪಟ್ಟಂತೆ ಸಂಶೋಧನೆಗೆ ಏರ್ಪಾಡು ಮಾಡುವುದು ಮತ್ತು ಆ ಬಗ್ಗೆ ಕಾರ್ಯ ವಿಧಾನವನ್ನು ನಿರ್ಧರಿಸುವುದು ಮತ್ತು ಅದಕ್ಕಾಗಿ ಸೂಕ್ತ ಮಾರ್ಗವನ್ನು ಕಂಡುಕೊಳ್ಳುವುದು.

೧೦. ಇತರ ಭಾರತೀಯ ಸಂಸ್ಕೃತಿಗೆ ಸಂಬಂಧಪಟ್ಟಂತೆ ಕನ್ನಡ ಭಾಷೆ ಮತ್ತು ಸಾಹಿತ್ಯದಲ್ಲಿ ಅಧ್ಯಯನವನ್ನು ಪ್ರಾರಂಭಿಸುವುದು.

೧೧. ಕನ್ನಡ ಭಾಷೆ ಮತ್ತು ಸಾಹಿತ್ಯದಲ್ಲಿ ಪ್ರವೃತ್ತಿಗಳ ಆಳವಾದ ತಿಳಿವಳಿಕೆಯ ಆಧಾರದ ಮೇಲೆ ಉನ್ನತ ಶಿಕ್ಷಣ ಮತ್ತು ಸಂಶೋಧನಾ ಕಮ್ಮಟಗಳನ್ನು ಸಂಘಟಿಸುವುದು.

೧೨. ಪ್ರಾಚೀನ ಕನ್ನಡ ಸಂಸ್ಕೃತಿಯನ್ನು ಪುನರುಜ್ಜೀವನಗೊಳಿಸುವ ಮತ್ತು ಪುನರ್‌ಶೋಧನೆ ಮಾಡುವ ದೃಷ್ಟಿಯಿಂದ ಪುರಾತತ್ವವನ್ನು ಅದರ ಎಲ್ಲ ವಿವಿಧ ಅಂಶಗಳ ಬಗ್ಗೆ ಉತ್ತೇಜನ ನೀಡುವುದು.

೧೩. ಮುಂದೆ ಸಂಶೋಧನೆಗೆ ಅನುಕೂಲ ಮಾಡಿಕೊಡುವುದಕ್ಕಾಗಿ ರಾಜ್ಯದಲ್ಲಿಯ ಸ್ಮಾರಕಗಳನ್ನು ಕಾಪಾಡುವುದು.

೧೪. ಕಲೆ, ವಾಸ್ತುಶಿಲ್ಪ, ಶಿಲ್ಪಕಲೆ, ವರ್ಣಚಿತ್ರ, ಪ್ರತಿಮಾಶಾಸ್ತ್ರ, ಶಾಸನಶಾಸ್ತ್ರ, ರಂಗಭೂಮಿ, ನೃತ್ಯ, ಸಂಗೀತ, ಗುಡ್ಡಗಾಡಿನವರ ಕಲೆ, ಧರ್ಮ, ತತ್ವಜ್ಞಾನ, ಸಾಮಾಜಿಕ ಆಂದೋಲನ ಮುಂತಾದವುಗಳ ಮೂಲಕ ವ್ಯಕ್ತವಾಗಿರುವ ಕನ್ನಡ ಸಂಸ್ಕೃತಿಯನ್ನು ಸಂಯೋಜಿಸುವುದು.

೧೫. ಸಾಂಪ್ರದಾಯಿಕ ಗುಡ್ಡಗಾಡು ಜನಪದ ಕಲೆ ಮತ್ತು ಪ್ರಸಕ್ತ ಕಲೆಗಳನ್ನು ದಾಖಲಿಡುವುದು, ಸಂರಕ್ಷಿಸುವುದು, ವಿಶ್ಲೇಷಿಸುವುದು ಮತ್ತು ಪ್ರಕಟಿಸುವುದು.

೧೬. ವಿಜ್ಞಾನ ಮತ್ತು ತಂತ್ರಜ್ಞಾನದಲ್ಲಿನ ಆಧುನಿಕ ಮುನ್ನಡೆಗಳಿಗೆ ಸಂಬಂಧಪಟ್ಟಂತೆ ಕನ್ನಡವನ್ನು ಶಿಕ್ಷಣ ಮಾಧ್ಯಮವನ್ನಾಗಿ ಅಭಿವೃದ್ಧಿಗೊಳಿಸುವುದು.

೧೭. ಇತರ ದ್ರಾವಿಡ ಮತ್ತು ಆರ್ಯ ಭಾಷೆಗಳೊಂದಿಗೆ ಕನ್ನಡದ ತೌಲನಿಕ ಅಧ್ಯಯನವನ್ನು ಬೆಳೆಸುವುದು.

೧೮. ಉತ್ಕೃಷ್ಟ ಮಾದರಿಯ ವಸ್ತುಗಳು ಮತ್ತು ಕರ್ನಾಟಕದ ಕಲಾಕೃತಿಗಳನ್ನು ಸಂಗ್ರಹಿಸಿಡಲು ಒಂದು ವಸ್ತುಸಂಗ್ರಹಾಲಯವನ್ನು ನಿರ್ಮಿಸುವುದು.

೧೯. ಕನ್ನಡದಲ್ಲಿ ಸಮಾಜವಿಜ್ಞಾನಗಳ ಬೆಳವಣಿಗೆಗೆ ಯೋಜನೆಗಳನ್ನು ರೂಪಿಸಿ ಅನುಷ್ಠಾನಕ್ಕೆ ತರುವುದು.

೨೦. ಕನ್ನಡ ಭಾಷೆ, ಸಾಹಿತ್ಯ, ಸಂಸ್ಕೃತಿ, ಕಲೆ, ತಂತ್ರಜ್ಞಾನಗಳಿಗೆ ಸಂಬಂಧಿಸಿದಂತೆ ಸಂವಾದ, ಚರ್ಚೆ, ವಿಚಾರಸಂಕಿರಣ, ಕಮ್ಮಟ, ತರಬೇತಿ ಕಾರ್ಯಾಗಾರಗಳನ್ನು ರೂಪಿಸಿ ನಿರ್ವಹಿಸುವುದು.

೨೧. ನಿಯಮಾನುಸಾರ ಷರತ್ತುಗಳ ಮೇರೆಗೆ ಸಂಶೋಧನೆ ನಡೆಸುವ ಕೇಂದ್ರಗಳಿಗೆ ಮಾನ್ಯತೆ ನೀಡುವುದು ಮತ್ತು ಪದವಿ, ಡಿಪ್ಲೊಮಾ ಮತ್ತು ಉನ್ನತ ಸಂಶೋಧನಾ ಪದವಿಗಳನ್ನು ಪ್ರಾರಂಭಿಸುವುದು.

೨೨. ಗ್ರಂಥಾಲಯಗಳು, ಪ್ರಸಾರಾಂಗ, ಮಾಹಿತಿ ಕೇಂದ್ರ, ಸಂಗ್ರಹಾಲಯಗಳು, ಸಂಶೋಧನಾ ಸಂಸ್ಥೆಗಳನ್ನು ಪ್ರಾರಂಭಿಸುವುದು ಮತ್ತು ವಿಶ್ವವಿದ್ಯಾಲಯದಿಂದ ಸ್ಥಾಪಿಸಲಾದ ಅಥವಾ ನಿರ್ವಹಿಸಲಾದ ಇತರ ಸಂಶೋಧನಾ ಸಂಸ್ಥೆಗಳನ್ನು ಪ್ರಾರಂಭಿಸಿ ನಿರ್ವಹಿಸುವುದು.